ಬೆಂಗಳೂರು
ನಗರ ವಿಶ್ವವಿದ್ಯಾನಿಲಯ

BENGALURU
CITY UNIVERSITY

*Office of the Registrar, Central College Campus, Dr. B.R. Ambedkar Veedhi, Bengaluru – 560 001.*
*PhNo.080-22131385, E-mail:* registrar@bcu.ac.in

ಸಂಖ್ಯೆ: ಬಿಸಿಯು/ಎಸ್‌ವೈಎನ್/ಸಿಂಡಿಕೇಟ್/ಅಸಾಮಾನ್ಯ/388/2024–25 ದಿನಾಂಕ: 18.02.2025

## ಅಧಿಸೂಚನೆ

ವಿಷಯ: ದಿನಾಂಕ 04.02.2025 ರಂದು ಜರುಗಿದ ಸಿಂಡಿಕೇಟ್ ಸಭೆಯ ನಡವಳಿಗಳಿಗೆ ಅಂಶಿಕ ತಿದ್ದುಪಡಿ ಕುರಿತು

ಉಲ್ಲೇಖ: 1. ಈ ಕಛೇರಿ ಪತ್ರ ಸಂ. ಬಿಸಿಯು/ಎಸ್‌ವೈಎನ್/ಅಸಾಮಾನ್ಯ–ಸಿಂಡಿಕೇಟ್/378/2024–25 ದಿನಾಂಕ 07.12.2024
2. ಕುಲಪತಿಗಳ ಅನುಮೋದನೆ ದಿನಾಂಕ: 18.02.2025

***

ಉಲ್ಲೇಖ (1) ರ ಪತ್ರದೊಂದಿಗೆ ಕಳುಹಿಸಲಾದ ದಿನಾಂಕ 04.02.2025 ರಂದು ಜರುಗಿದ ಸಿಂಡಿಕೇಟ್ ಸಭೆಯ ನಡವಳಿಗಳ ವಿಷಯ ಸಂ.1 ರಲ್ಲಿ ಮಂಡಿಸಲಾದ 2025–26ನೇ ಶೈಕ್ಷಣಿಕ ಸಾಲಿಗೆ ಅರ್ಜಿ ಸಲ್ಲಿಸಿದ ಮಹಾವಿದ್ಯಾಲಯಗಳ/ಸಂಸ್ಥೆಗಳ ತನಿಖೆಗಾಗಿ ಸ್ಥಳೀಯ ವಿಚಾರಣಾ ಸಮಿತಿಗಳನ್ನು ರಚಿಸುವ ಹಾಗೂ ಸ್ಥಳೀಯ ವಿಚಾರಣಾ ಸಮಿತಿಗಳು ಪರಿಶೀಲಿಸಬೇಕಾದ ಅಂಶಗಳ ಕುರಿತ ಪರಾಮರ್ಶಕ ಟಿಪ್ಪಣಿ ಹಾಗೂ ಅದಕ್ಕೆ ಸಂಬಂಧಿಸಿದ ಸಿಂಡಿಕೇಟ್ ತೀರ್ಮಾನದಲ್ಲಿ ಕಂಡುಬರುವ **"31.12.2024"** ದಿನಾಂಕವನ್ನು **"13.11.2024"** ಎಂದು ತಿದ್ದುಪಡಿಮಾಡಲಾಗಿದೆ. ಮಾನ್ಯ ಸದಸ್ಯರು, ದಯವಿಟ್ಟು ಮೇಲಿನ ತಿದ್ದುಪಡಿಯನ್ನು ನಡವಳಿಗಳ ಭಾಗವಾಗಿ ಪರಿಗಣಿಸಲು ಕೋರಲಾಗಿದೆ.

ಕುಲಸಚಿವರು

ಗೆ,
ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಎಲ್ಲ ಸಿಂಡಿಕೇಟ್ ಸದಸ್ಯರುಗಳಿಗೆ.

ಪ್ರತಿ:

1. ರಾಜ್ಯಪಾಲರ ವಿಶೇಷ ಕಾರ್ಯದರ್ಶಿಗಳು, ರಾಜ ಭವನ, ಬೆಂಗಳೂರು–560 001
2. ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯಗಳು), ಕರ್ನಾಟಕ ಸರ್ಕಾರ, ಬಹುಯಮಹಡಿಗಳ ಕಟ್ಟಡ, ಬೆಂಗಳೂರು–560 001
3. ಕುಲಪತಿಗಳು, ಕುಲಸಚಿವರು, ಕುಲಸಚಿವರು(ಮೌಲ್ಯಮಾಪನ), ವಿತ್ತಾಧಿಕಾರಿಗಳ ಆಪ್ತ ಕಾರ್ಯಾಲಯ, ಬೆಂ.ನ.ವಿ.

ಬೆಂಗಳೂರು
ನಗರ ವಿಶ್ವವಿದ್ಯಾನಿಲಯ

BENGALURU
CITY UNIVERSITY

Office of the Registrar, Central College Campus, Dr. B.R. Ambedkar Veedhi, Bengaluru – 560 001.
PhNo.080-22131385, E-mail: registrar@bcu.ac.in

ಸಂ:ಬಿಸಿಯು/ಎಸ್‌ವೈಎನ್/ಅಸಾಮಾನ್ಯ–ಸಿಂಡಿಕೇಟ್/318/2024–25 ದಿನಾಂಕ: 07.02.2025

ಗೆ,
ಮಾನ್ಯ ಸಿಂಡಿಕೇಟ್ ಸದಸ್ಯರು,
ಬೆಂಗಳೂರು ನಗರ ವಿಶ್ವವಿದ್ಯಾನಿಲಯ,
ಬೆಂಗಳೂರು–560001

ಮಾನ್ಯರೆ,

ವಿಷಯ: ದಿನಾಂಕ: 04.02.2025 ರಂದು ಜರುಗಿದ ಅಸಾಮಾನ್ಯ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು.

****

ದಿನಾಂಕ: 04.02.2025 ರಂದು ಜರುಗಿದ ಸಿಂಡಿಕೇಟ್ ಅಸಾಮಾನ್ಯ ಸಭೆಯ ನಡವಳಿಗಳನ್ನು ಮಾನ್ಯ ಕುಲಪತಿಗಳು ಅನುಮೋದಿಸಿದಂತೆ, ಬೆಂಗಳೂರು ವಿಶ್ವವಿದ್ಯಾಲಯದ ಪರಿನಿಯಮಾವಳಿ 5.16 ರನ್ವಯ ಕಳುಹಿಸುತ್ತಿದ್ದೇನೆ.

ನಡವಳಿಗಳನ್ನು ರವಾನಿಸಿದ ದಿನಾಂಕದಿಂದ ಏಳು ದಿನಗಳೊಳಗಾಗಿ ಸಭೆಯಲ್ಲಿ ಹಾಜರಿದ್ದ ಸದಸ್ಯರು, ನಡವಳಿಗಳ ಬಗ್ಗೆ ಯಾವುದೇ ಆಕ್ಷೇಪಣೆಯನ್ನು ಕಳುಹಿಸದಿದ್ದಲ್ಲಿ, ಮೇಲೆ ಹೇಳಿದ ಪರಿನಿಯಮಾವಳಿಗಳ ಅನುಸಾರ ಅವುಗಳನ್ನು ಸ್ಥಿರೀಕರಿಸಲಾಗಿದೆ ಎಂದು ಪರಿಗಣಿಸಲಾಗುವುದು.

ತಮ್ಮ ವಿಶ್ವಾಸಿ,

ಕುಲಸಚಿವರು

ಅಡಕ: ಮೇಲಿನಂತೆ

ಪ್ರತಿಗಳು:

1. ರಾಜ್ಯಪಾಲರ ವಿಶೇಷ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು – 560 001.
2. ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯ), ಕರ್ನಾಟಕ ಸರ್ಕಾರ, ಬೆಂಗಳೂರು
3. ಕುಲಪತಿಗಳು, ಕುಲಸಚಿವರು, ಕುಲಸಚಿವರು (ಮೌಲ್ಯಮಾಪನ), ವಿತ್ತಾಧಿಕಾರಿಗಳ ಆಪ್ತ ಕಾರ್ಯದರ್ಶಿಗಳಿಗೆ. ಬೆಂ.ನ.ವಿ.

ಬೆಂಗಳೂರು ನಗರ ವಿಶ್ವವಿದ್ಯಾನಿಲಯ BENGALURU CITY UNIVERSITY
Office of the Registrar, Central College Campus, Dr. B.R. Ambedkar Veedhi, Bengaluru – 560 001.
Ph.No.080-22131385, E-mail: registrar@bcu.ac.in

ಸಂಖ್ಯೆ:ಬಿಸಿಯು/ಎಸ್‌ವೈಎನ್/ಅಸಾಮಾನ್ಯ-ಸಿಂಡಿಕೇಟ್/518 /2024–25 ದಿನಾಂಕ: 07.02.2025

ದಿನಾಂಕ 04.02.2025 ರಂದು ಬೋರ್ಡ್‌ರೂಮ್, ಜ್ಞಾನಜ್ಯೋತಿ ಸಭಾಂಗಣ, ಅರಮನೆ ರಸ್ತೆ, ಬೆಂಗಳೂರು – 560 001 ಇಲ್ಲಿ ಜರುಗಿದ ಸಿಂಡಿಕೇಟ್ ಅಸಾಮಾನ್ಯ ಸಭೆಯ ನಡವಳಿಗಳು.

**ಸಭೆಯಲ್ಲಿ ಉಪಸ್ಥಿತರಿದ್ದ ಸದಸ್ಯರು:**

| | | |
|---|---|---|
| 1. | ಪ್ರೊ. ಲಿಂಗರಾಜ ಗಾಂಧಿ<br>ಕುಲಪತಿಗಳು, | ಸಭಾಧ್ಯಕ್ಷರು |
| 2. | ಶ್ರೀ. ಕೆ. ಎಂ. ಸುರೇಶ್ ಕುಮಾರ್<br>ಜಂಟಿ ನಿರ್ದೇಶಕರು<br>ತಾಂತ್ರಿಕ ಶಿಕ್ಷಣ ಇಲಾಖೆ | ಸದಸ್ಯರು |
| 3. | ಡಾ. ಜ್ಯೋತಿ ವೆಂಕಟೇಶ್ | ಸದಸ್ಯರು |
| 4. | ಡಾ. ಬಿ. ಆರ್. ಸುಪ್ರೀತ್ | ಸದಸ್ಯರು |
| 5. | ಡಾ. ಚೈತ್ರ ಟಿ. ಎಂ. | ಸದಸ್ಯರು |
| 6. | ಡಾ. ಸುಮಯಾ ಫಾತೀಮಾ | ಸದಸ್ಯರು |
| 7. | ಡಾ. ಎಂ. ಆರ್. ಲಕ್ಷ್ಮೀನಾರಾಯಣ | ಸದಸ್ಯರು |
| 8. | ಡಾ. ಎಲಿಝಾಬೆತ್ ಜಾಸ್ಮಿನ್ | ಸದಸ್ಯರು |
| 9. | ಶ್ರೀಮತಿ. ಡಿ. ಆರ್. ಸುಧಾ | ಸದಸ್ಯರು |
| 10. | ಶ್ರೀಮತಿ ಆಯೇಷಾ ಫರ್ಜಾನಾ | ಸದಸ್ಯರು |
| 11. | ಡಾ. ಹೆಚ್. ಕೃಷ್ಣರಾಮ್, | ಸದಸ್ಯರು |
| 12. | ರೆವ್ ಡಾ. ಫ್ರಾನ್ಸಿಸ್ ಅಸಿಸಿ ಅಲ್ಮೇದಾ | ಸದಸ್ಯರು |
| 13. | ಶ್ರೀ ವಿ. ಶಿವಕುಮಾರ್, | ಸದಸ್ಯರು |
| 14. | ಶ್ರೀ ಕೆ.ಪಿ. ಪಾಟೀಲ್ | ಸದಸ್ಯರು |
| 15. | ಶೀಮತಿ. ಶಿಲ್ಪಶ್ರೀ. ವಿ. ಎನ್ | ಸದಸ್ಯರು |
| 16. | ಡಾ. ಕೆ. ಶಿವಶಂಕರ್ | ಸದಸ್ಯರು |
| 17. | ಡಾ. ಆನಂದ ಕುಮಾರ್ ಸಿ. ಎಸ್<br>ಕುಲಸಚಿವರು (ಮೌಲ್ಯಮಾಪನ) | ಸದಸ್ಯರು |
| 18. | ಶ್ರೀ ಜವರೇಗೌಡ ಟಿ, ಕೆ.ಎ.ಎಸ್<br>ಕುಲಸಚಿವರು | ಸದಸ್ಯ ಕಾರ್ಯದರ್ಶಿಗಳು |

ಸಭೆಯ ಅಧ್ಯಕ್ಷತೆಯನ್ನು ವಹಿಸಿಕೊಂಡ ಮಾನ್ಯ ಕುಲಪತಿಗಳಿಗೆ ಹಾಗೂ ಸಭೆಯಲ್ಲಿ ಉಪಸ್ಥಿತರಿದ್ದ ಎಲ್ಲ ಸದಸ್ಯರುಗಳಿಗೆ ಕುಲಸಚಿವರು ಸ್ವಾಗತಿಸಿ, ಪ್ರಸ್ತಾವಿಕವಾಗಿ ಮಾತನಾಡಿ ಸಭೆಗೆ ಚಾಲನೆ ನೀಡಲು ಮಾನ್ಯ ಕುಲಪತಿಗಳಿಗೆ ವಿನಂತಿಸಿದರು.

ಮಾನ್ಯ ಕುಲಪತಿಗಳು ಎಲ್ಲ ಸದಸ್ಯರನ್ನು ಮತ್ತೊಮ್ಮೆ ಸ್ವಾಗತಿಸಿ, ದಿನಾಂಕ 31.12.2024 ರಿಂದ ವಿಶ್ವವಿದ್ಯಾಲಯದಲ್ಲಿ ಜರುಗಿದ ವಿವಿಧ ಚಟುವಟಿಕೆಗಳ ಕುರಿತು ಕೆಳಗಿನ ಮಾಹಿತಿಯನ್ನು ಸಭೆಗೆ ನೀಡಿದರು.

1. ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ರ ಪ್ರಕರಣ 28(1)(ಹೆಚ್) ರಡಿಯಲ್ಲಿ ಪ್ರಾಧ್ಯಾಪಕರ ಸೇವಾ ಹಿರಿತನ ಮತ್ತು ಸರದಿಯ ಪ್ರಕಾರ ಸಿಂಡಿಕೇಟ್ ಸದಸ್ಯರಾಗಿ ದಿನಾಂಕ 01.01.2025 ರಂದು ನಾಮನಿರ್ದೇಶಿತರಾದ ಡಾ. ಕೆ. ಶಿವಶಂಕರ್, ಪ್ರಾಧ್ಯಾಪಕರು, ರಸಾಯನಶಾಸ್ತ್ರ ವಿಭಾಗ, ಬೆಂಗಳೂರು ನಗರ ವಿಶ್ವವಿದ್ಯಾನಿಲಯ, ಬೆಂಗಳೂರು ರವರನ್ನು ಇಂದಿನ ಈ ಸಭೆಗೆ ಸ್ವಾಗತಿಸುತ್ತೇನೆ.

2. ರಸಾಯನಶಾಸ್ತ್ರ ವಿಭಾಗ ನಿವೃತ್ತ ಪ್ರಾಧ್ಯಾಪಕರಾದ ಡಾ. ವಿ. ಗಾಯತ್ರಿರವರು ಎಂ.ಎಸ್ಸಿ ಇನ್ ಆರ್ಗಾನಿಕ್ ಕೆಮೆಸ್ಟ್ರಿ ಪದವಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗೆ "ಪ್ರೊ. ಎನ್. ಎಂ. ನಂಜೇಗೌಡ" ಚಿನ್ನದ ಪದಕವನ್ನು ಸ್ಥಾಪನೆ ಮಾಡಿರುತ್ತಾರೆ. ಸದರಿ ಚಿನ್ನದ ಪದಕ ಮುಂಬರುವ ಘಟಿಕೋತ್ಸವದಲ್ಲಿ ಪ್ರದಾನ ಮಾಡಲಾಗುವುದು.

3. ನಗರದ ಸೆಂಟ್. ಫ್ರಾನ್ಸಿಸ್ ಕಾಲೇಜಿನ ಶ್ರೀ ಫಾಜಿಲ್ ರೆಹಮಾನ್ ಇವರು ಆಚಾರ್ಯ ನಾಗಾರ್ಜುನ ವಿಶ್ವವಿದ್ಯಾನಿಲಯ ಆಂಧ್ರ ಪ್ರದೇಶದಲ್ಲಿ ಜರುಗಿದ ನೈಋತ್ಯ ವಲಯ (South West Zone) ಪಂದ್ಯಾಟಗಳ ವೇಟ್ ಲಿಫ್ಟಿಂಗ್ ಸ್ಪರ್ಧೆಯಲ್ಲಿ ಬೆಳ್ಳಿಯ ಪದಕವನ್ನು ಹಾಗೂ ಪಂಜಾಬ್‌ನ ಲವ್ಲಿ ಪ್ರೊಫೆಷನಲ್ ವಿಶ್ವವಿದ್ಯಾಲಯದಲ್ಲಿ ಜರುಗಿದ ಅಖಿಲ ಭಾರತ (All India) ವೇಟ್ ಲಿಫ್ಟಿಂಗ್ ಸ್ಪರ್ಧೆಯಲ್ಲಿ ಬೆಳ್ಳಿಯ ಪದಕವನ್ನು ಗಳಿಸಿದ್ದಾರೆ. ಶ್ರೀ ಅಜಯ್ ಅಶೋಕ್ ಇವರು ಅಖಿಲ ಭಾರತ (All India) ವೇಟ್ ಲಿಫ್ಟಿಂಗ್ ಸ್ಪರ್ಧೆಯಲ್ಲಿ 6ನೇ ಸ್ಥಾನ ಪಡೆದು ಖೇಲೋ ಇಂಡಿಯಾ ಪಂದ್ಯಕ್ಕೆ ಆಯ್ಕೆಯಾಗಿದ್ದಾರೆ.
ಕರಾಟೆ ಮಹಿಳೆಯರ ತಂಡವು ಅಖಿಲ ಭಾರತ (All India) ಪಂದ್ಯಕ್ಕೆ ಆಯ್ಕೆಯಾಗಿದೆ.

4. ದಕ್ಷಿಣ ವಲಯ (South Zone) ಹಾಕಿ ಪಂದ್ಯಾಟದಲ್ಲಿ ಪುರುಷರ ತಂಡ ಚಿನ್ನದ ಪದಕವನ್ನು ಮತ್ತು ಮಹಿಳೆಯರ ಕ್ರಿಕೆಟ್ ತಂಡ ಬೆಳ್ಳಿಯ ಪದಕವನ್ನು ಗಳಿಸಿದೆ.

5. 17.01.2025ರಂದು ಪ್ರಾಣಿಶಾಸ್ತ್ರ ಅಧ್ಯಯನ ವಿಭಾಗದಲ್ಲಿ, "Drosophila Melanogaster as a model organism in Laboratory" ವಿಷಯ ಕುರಿತು ಎರಡು ದಿವಸಗಳ ಕಾರ್ಯಾಗಾರವನ್ನು ಆಯೋಜಿಸಲಾಯಿತು. ಬೆಂಗಳೂರು ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿಗಳಾದ ಪ್ರೊ. ಹೆಚ್.ಎ. ರಂಗನಾಥರವರು ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿ, ಪ್ರಮುಖ ಭಾಷಣ ನೀಡಿದರು. ಎರಡು ದಿವಸ ಜರುಗಿದ ಕಾರ್ಯಾಗಾರದಲ್ಲಿ, ಸಂಯೋಜಿತ ಮಹಾವಿದ್ಯಾಲಯಗಳ ಪ್ರಾಣಿಶಾಸ್ತ್ರ ಹಾಗೂ ಸಂಬಂಧಿತ ವಿಷಯಗಳ ಅಧ್ಯಾಪಕರು ಮತ್ತು ವಿದ್ಯಾರ್ಥಿಗಳು ಭಾಗವಹಿಸಿದರು.

6. ಭಾರತದ 76ನೇ ಗಣರಾಜ್ಯೋತ್ಸವವನ್ನು ದಿನಾಂಕ 26.01.2025ರಂದು ಬೆಳಿಗ್ಗೆ 9.00 ಗಂಟೆಗೆ, ಗಡಿಯಾರ ಗೋಪುರ ಕಟ್ಟಡದ ಪರಿಸರದಲ್ಲಿ ಆಚರಿಸಲಾಯಿತು. ವಿಶ್ವವಿದ್ಯಾಲಯದ ಅಧ್ಯಾಪಕರು, ಸಿಬ್ಬಂದಿಗಳು ಮತ್ತು ವಿದ್ಯಾರ್ಥಿಗಳು ಈ ಸಮಾರಂಭದಲ್ಲಿ ಭಾಗವಹಿಸಿದರು.

7. ವಿಶ್ವವಿದ್ಯಾಲಯದ ಪರಿಸರ ಮತ್ತು ಹವಾಮಾನ ಬದಲಾವಣೆ (Environment and Climate Change) ವಿಭಾಗದಲ್ಲಿ ದಿನಾಂಕ 27.01.2025 ರಂದು Environmental Society ಉದ್ಘಾಟಿಸಲಾಯಿತು. ನಗರದ Get Plastic Recycling ಸಂಸ್ಥೆಯ ನಿರ್ದೇಶಕರಾದ ಶ್ರೀ ಬಾಬುಲಾಲ್ ಶಿರದಾನಾ ರವರು ಉದ್ಘಾಟನೆಯನ್ನು ನೆರವೇರಿಸಿದರು.

8. 29.01.2025ರಂದು ಬೆಳಿಗ್ಗೆ 11.00 ಗಂಟೆಗೆ, ವಿಶ್ವವಿದ್ಯಾಲಯದಲ್ಲಿ ನಿರ್ಮಿಸಲಾಗಿರುವ ನೂತನ ಶೈಕ್ಷಣಿಕ ಭವನದ 6ನೇ ಮಹಡಿಯಲ್ಲಿ, ಮಹಾತ್ಮಗಾಂಧಿ ಅಧ್ಯಯನ ಕೇಂದ್ರದ ಉದ್ಘಾಟನೆಯನ್ನು ನಾಡೋಜ ವೂಡೇ ಪಿ. ಕೃಷ್ಣ, ಅಧ್ಯಕ್ಷರು, ಗಾಂಧಿ ಭವನ, ಬೆಂಗಳೂರು ಇವರು ನೆರವೇರಿಸಿದರು.

9. 30.01.2025ರಂದು ಸ್ವಾತಂತ್ರ ಸಂಗ್ರಾಮದಲ್ಲಿ ಪ್ರಾಣತೆತ್ತು ಹುತಾತ್ಮರಾದವರ ಸ್ಮರಣಾರ್ಥವಾಗಿ "ಹುತಾತ್ಮರ ದಿನಾಚರಣೆ" ಯನ್ನು ಆಚರಿಸಲಾಯಿತು.

10. 30.01.2025ರಂದು ಮೈಸೂರಿನ ರೀಜನಲ್ ಇನ್ಸ್ಟಿಟ್ಯೂಟ್ ಆಫ್ ಎಜ್ಯುಕೇಶನ್ ಆಯೋಜಿಸಿದ 'Innovative Practices and Experiences in School based Career Development Programmes for Students' ವಿಷಯದ ರಾಷ್ಟ್ರೀಯ ಸಮ್ಮೇಳನದ ಮುಖ್ಯ ಅತಿಥಿಯಾಗಿ ಭಾಗವಹಿಸಿ ಆಶಯ ಭಾಷಣ ನೀಡಲಾಯಿತು.

ಮೇಲಿನ ವರದಿಯನ್ನು ಮಂಡಿಸಿದ ನಂತರ ಸದಸ್ಯ ಕಾರ್ಯದರ್ಶಿಗಳಾದ ಕುಲಸಚಿವರಿಗೆ ಕಾರ್ಯಸೂಚಿಯನ್ನು ಮಂಡಿಸಲು ತಿಳಿಸಿದರು.

ಅದರಂತೆ ಕುಲಸಚಿವರು ಕಾರ್ಯಸೂಚಿಯನ್ನು ಸಭೆಯಲ್ಲಿ ಮಂಡಿಸಿದರು.

**ವಿಷಯ ಸಂಖ್ಯೆ: 01**

ವಿಷಯ: 2025-26ನೇ ಶೈಕ್ಷಣಿಕ ಸಾಲಿಗೆ ಅರ್ಜಿ ಸಲ್ಲಿಸಿದ ಮಹಾವಿದ್ಯಾಲಯಗಳು/ ಸಂಸ್ಥೆಗಳ ತನಿಖೆಗಾಗಿ ಸ್ಥಳೀಯ ವಿಚಾರಣಾ ಸಮಿತಿಗಳನ್ನು ರಚಿಸುವ ಹಾಗೂ ಸ್ಥಳೀಯ ವಿಚಾರಣಾ ಸಮಿತಿಗಳು ಪರಿಶೀಲಿಸಬೇಕಾದ ಅಂಶಗಳ ಕುರಿತು.

***ಪರಾಮರ್ಶಕ ಟಿಪ್ಪಣಿ:***

2025-26ನೇ ಶೈಕ್ಷಣಿಕ ಸಾಲಿಗೆ ಮಹಾವಿದ್ಯಾಲಯಗಳು ನವೀಕರಣ/ಶಾಶ್ವತ ಸಂಯೋಜನೆ/ಶಾಶ್ವತ ಸಂಯೋಜನೆ ನವೀಕರಣ/ವಿದ್ಯಾರ್ಥಿ ಪ್ರಮಾಣ ಹೆಚ್ಚಳ/ಹೊಸ ಕೋರ್ಸು/ಕೊರ್ಸು ಮುಚ್ಚುವಿಕೆ/ಸ್ಥಳ ಬದಲಾವಣೆ ಹಾಗೂ ಹೊಸ ಮಹಾವಿದ್ಯಾಲಯಗಳು ಇತ್ಯಾದಿ ಕುರಿತಂತೆ ಮಹಾವಿದ್ಯಾಲಯಕ್ಕೆ ಭೇಟಿ ನೀಡಿ, ಪರಿಶೀಲಿಸಿ ವರದಿ ಸಲ್ಲಿಸಲು ಅಗತ್ಯ ಸಂಖ್ಯೆಯ ಸಮಿತಿಗಳನ್ನು ರಚಿಸುವ ಕುರಿತು ದಿನಾಂಕ 31.12.2024 ರಂದು ಜರುಗಿದ ಸಿಂಡಿಕೇಟ್ ಸಭೆ ಕೆಳಗಿನಂತೆ ತೀರ್ಮಾನಿಸಿದೆ.

**ಮಾನ್ಯ ಕರ್ನಾಟಕ ಉಚ್ಚನ್ಯಾಯಾಲಯದಲ್ಲಿ ಸಲ್ಲಿಸಿರುವ ರಿಟ್ ಅರ್ಜಿ ಸಂಖ್ಯೆ 5645/2023 (GM-RES) ಹಾಗೂ ಅದರಲ್ಲಿ ನೀಡಿರುವ ಮಧ್ಯಂತರ ಆದೇಶ ಇನ್ನು ಊರ್ಜಿತದಲ್ಲಿರುವುದನ್ನು ಖಚಿತಪಡಿಸಿಕೊಂಡು, ಈ ಕುರಿತು ರಾಜ್ಯ ಸರ್ಕಾರ ಹೊರಡಿಸಿರುವ ಆದೇಶಗಳನ್ನು ಹಾಗೂ ಕರ್ನಾಟಕ ಉಚ್ಚನ್ಯಾಯಾಲಯ ಕಾಲಕಾಲಕ್ಕೆ ನೀಡುವ ತೀರ್ಪುಗಳನ್ನು ಅನುಸರಿಸಿ, 2025-26ನೇ ಸಾಲಿಗೆ ಮಹಾವಿದ್ಯಾಲಯಗಳು ಸಲ್ಲಿಸುವ ವಿವಿಧ ಪ್ರಕಾರ ಸಂಯೋಜನೆ ಅರ್ಜಿಗಳನ್ನು ವಿಂಗಡಿಸಿ, ಅದಕ್ಕನುಗುಣವಾಗಿ ಅಗತ್ಯ ಸಂಖ್ಯೆಯ ಸ್ಥಳೀಯ ವಿಚಾರಣಾ ಸಮಿತಿಗಳನ್ನು ರಚಿಸಲು ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಲು ಸಿಂಡಿಕೇಟ್ ಸಭೆ ನಿರ್ಣಯಿಸಿತು.**

ಕರ್ನಾಟಕ ಉಚ್ಚನ್ಯಾಯಾಲಯದಲ್ಲಿ ಹಿಂದಿನ ಸಿಂಡಿಕೇಟ್ ಸದಸ್ಯರಾದ ಶ್ರೀ. ಎಂ.ವಿ ರಂಗಪ್ಪ ನವರು ಸಲ್ಲಿಸಿದ ರಿಟ್ ಅರ್ಜಿಯ ಮೇಲೆ ನ್ಯಾಯಾಲಯ ನೀಡಿದ ತೀರ್ಪು ಕೆಳಗಿನಂತಿದೆ:

What is called in question is a circular dated 24.11.2022. The learned counsel appearing for the petitioner takes this Court through the documents appended to the petition seeking to contend that identical efforts are made every alternate year by the State Government and every time, this Court is intervened. He would cite an interim order granted in W.P.No. 55554 – 55557 /2018 on 18.12.2018, which was a similar effort by the State to change the composition of the LIC.

In the light of the earlier interim order which has been granted, subject to the filing of statement of objections, by the first respondent, the State shall not precipitate the matter qua circular dated 24.11.2022, till the next date of hearing.

ನ್ಯಾಯಾಲಯದ ಆದೇಶ ಹಾಗೂ ಸರ್ಕಾರದ ಸುತ್ತೋಲೆಗಳ ಹಿನ್ನೆಲೆಯಲ್ಲಿ ಸ್ಥಳೀಯ ವಿಚಾರಣಾ ಸಮಿತಿಗಳನ್ನು ರಚಿಸುವ ಕುರಿತು ಮಾಹಿತಿ ನೀಡುವಂತೆ ಕೋರಿ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ ಇವರಿಗೆ ದಿನಾಂಕ. 09.12.2024 ರಂದು ಪತ್ರ ಬರೆಯಲಾಗಿದೆ, ಅದಕ್ಕೆ ಇದುವರೆಗೆ ಉತ್ತರ ಬಂದಿರುವುದಿಲ್ಲ.

ದಿನಾಂಕ 27.01.2025 ರಂದು 4 ಜನ ಸಿಂಡಿಕೇಟ್ ಸದಸ್ಯರಾದ ಡಾ. ಕೃಷ್ಣ ರಾಮ್. ಹೆಚ್, ಶ್ರೀ ಕೆ. ಪಿ. ಪಾಟೀಲ್, ಶ್ರೀಮತಿ ಶಿಲ್ಪಶ್ರೀ ವಿ. ಎನ್ ಹಾಗೂ ಡಾ. ಸುಪ್ರೀತ್ ಬಿ. ಆರ್ ರವರು ಸಹಿ ಮಾಡಿ ಕುಲಸಚಿವರಿಗೆ ಸಲ್ಲಿಸಿದ ಪತ್ರದಲ್ಲಿ, ಸ್ಥಳೀಯ ವಿಚಾರಣಾ ಸಮಿತಿಗಳನ್ನು ರಚಿಸುವ ಕುರಿತು ಸರ್ಕಾರದಿಂದ ಮಾಹಿತಿ ಕೋರಿರುವ ಕ್ರಮಕ್ಕೆ ಅಸಮಾಧಾನ ವ್ಯಕ್ತಪಡಿಸಿ, ಕಳೆದ ವರ್ಷದಂತೆ ಈ ವರ್ಷ ಕೂಡ ಸಿಂಡಿಕೇಟ್ ಸದಸ್ಯರನ್ನು ಅಧ್ಯಕ್ಷರಾಗಿ ನೇಮಕ ಮಾಡಿ ಸ್ಥಳೀಯ ವಿಚಾರಣಾ ಸಮಿತಿಗಳನ್ನು ರಚಿಸಲು ಒತ್ತಾಯಿಸಿದ್ದಾರೆ. ಮಾನ್ಯ ಸದಸ್ಯರು ಸಲ್ಲಿಸಿದ ಪತ್ರದ ಪ್ರತಿ ಲಗತ್ತಿಸಲಾಗಿದೆ.

ಈ ಹಿನ್ನಲೆಯಲ್ಲಿ 2025-26ನೇ ಸಾಲಿಗೆ ಅನುಸರಿಸಬೇಕಾದ ಸಂಯೋಜನಾ ಪ್ರಕ್ರಿಯೆಗಳ, ಮಾನದಂಡಗಳ ಮತ್ತು UUCMS ಪೋರ್ಟಲ್‌ನಲ್ಲಿ ದಾಖಲಿಸಬೇಕಾದ ಆನ್‌ಲೈನ್ ವಿವರಗಳ ಕುರಿತು ಅರಿತುಕೊಳ್ಳಲು ಹಾಗೂ ಸ್ಥಳೀಯ ವಿಚಾರಣಾ ಸಮಿತಿಗಳನ್ನು ರಚಿಸುವ ಕುರಿತು ಚರ್ಚಿಸಲು ವಿಷಯವನ್ನು ಸಿಂಡಿಕೇಟ್ ಸಭೆಯ ಮುಂದೆ ಮಂಡಿಸಲಾಗಿದೆ.

ವಿವರಣೆ:

ಸದಸ್ಯರಾದ ಶ್ರೀ ಕೆ. ಪಿ. ಪಾಟೀಲ್ ರವರು ಪ್ರಸ್ತಾಪಿತವಾದ ರಿಟ್ ಅರ್ಜಿಯಲ್ಲಿ ಕುಲಪತಿಗಳು ಮತ್ತು ಕುಲಸಚಿವರು ಪ್ರತಿವಾದಿಗಳಾಗಿರುವುದರಿಂದ ಅವರ ಹಂತದಲ್ಲಿಯೇ ಕ್ರಮಕೈಗೊಳ್ಳಬೇಕಾಗಿತ್ತು– ಸರ್ಕಾರಕ್ಕೆ ಪತ್ರ ಬರೆಯುವ ಅಗತ್ಯವಿರಲಿಲ್ಲ ವೆಂದು ತಿಳಿಸಿದರು.

4 ಜನ ಸಿಂಡಿಕೇಟ್ ಸದಸ್ಯರು ಸಹಿಮಾಡಿ ದಿನಾಂಕ 27.1.2025 ರಂದು ಸಲ್ಲಿಸಿದ ಪತ್ರದಲ್ಲಿ ಮಾನ್ಯ ಸದಸ್ಯರು ವ್ಯಕ್ತಪಡಿಸಿರುವ ಅಭಿಪ್ರಾಯವು ಸೇರಿದೆ ಎಂದು ತಿಳಿಸಿ, ಸದರಿ ಪತ್ರ ಈ ಸಭೆಯ ಕಾರ್ಯಸೂಚಿಯ ಭಾಗವಾಗಿದೆ ಎಂದು ಮಾನ್ಯ ಕುಲಪತಿಗಳು ತಿಳಿಸಿದರು.

ರಾಜ್ಯದ ಎಲ್ಲ ವಿಶ್ವವಿದ್ಯಾಲಯಗಳಿಗೆ ಸಂಬಂಧಿಸಿದಂತೆ, ಶೈಕ್ಷಣಿಕ ಮತ್ತು ಸಂಯೋಜನಾ ಕಾಲಾನುಕ್ರಮಗಳ ವೇಳಾಪಟ್ಟಿಯನ್ನು ರಾಜ್ಯ ಸರ್ಕಾರ ನಿರ್ಧರಿಸಿದ್ದು, ಹಲವು ಕಾಲೇಜುಗಳು ಸಂಯೋಜನಾ ಅರ್ಜಿಗಳನ್ನು ಸಲ್ಲಿಸದೇ ಇರುವುದರಿಂದ, 2–3 ಸಲ ಕೊನೆಯ ದಿನಾಂಕವನ್ನು ವಿಸ್ತರಿಸಲಾಗಿದೆ. ಈ ಕಾರಣದಿಂದ ವೇಳಾ ಪಟ್ಟಿಯ ಪ್ರಕಾರ ಸಂಯೋಜನಾ ಪ್ರಕ್ರಿಯೆಗಳನ್ನು ಜರುಗಿಸಲು ಸಾಧ್ಯವಾಗಿರುವುದಿಲ್ಲ. ಪ್ರಸ್ತಾಪಿತ ರಿಟ್ ಅರ್ಜಿಯನ್ನು ಸಲ್ಲಿಸಿದ ಹಿಂದಿನ ಸಿಂಡಿಕೇಟ್ ಸದಸ್ಯರಾದ ಶ್ರೀ ಎಂ. ವಿ. ರಂಗಪ್ಪನವರ ಸದಸ್ಯತ್ವದ ಅವಧಿ ಮುಕ್ತಾಯಗೊಂಡಿರುವುದು ಹಾಗೂ ಸದರಿ ರಿಟ್ ಅರ್ಜಿಯ ಮಧ್ಯಂತರ ಆದೇಶದಲ್ಲಿ Subject to the filing of Statememt of Objections by the First Respondent ಎಂದು ಆದೇಶಿಸಿರುವುದರಿಂದ ಪ್ರಥಮ ಪ್ರತಿವಾದಿಯಾಗಿರುವ ರಾಜ್ಯ ಸರ್ಕಾರದಿಂದ ವಸ್ತು ಸ್ಥಿತಿಯ ಮಾಹಿತಿ ಹಾಗೂ ಮಾರ್ಗದರ್ಶನ ಪಡೆಯಲು ಸರ್ಕಾರಕ್ಕೆ ಪತ್ರ ಬರೆಯಲಾಗಿದೆ ಎಂದು ಹೇಳಿದರು.

ಸಮಿತಿ ರಚನೆ ಕುರಿತು ಸರ್ಕಾರ ಹಲವಾರು ಸಂದರ್ಭಗಳಲ್ಲಿ ಸುತ್ತೋಲೆ, ಪತ್ರಗಳ ಮುಖಾಂತರ ಸಿಂಡಿಕೇಟ್ ಸದಸ್ಯರನ್ನು ಸ್ಥಳೀಯ ವಿಚಾರಣಾ ಸಮಿತಿಯ ಅಧ್ಯಕ್ಷರನ್ನಾಗಿ ಅಥವಾ ಸದಸ್ಯರನ್ನಾಗಿ ನಾಮನಿರ್ದೇಶನ ಮಾಡದಿರುವ ಕುರಿತು ಸ್ಪಷ್ಟ ಹಾಗೂ ನಿಖರವಾದ ನಿರ್ದೇಶನಗಳನ್ನು ನೀಡಿರುವುದನ್ನು ತಿಳಿಸಿ, ದಿನಾಂಕ 22.11.2022ರ ಸರ್ಕಾರದ ಸುತ್ತೋಲೆಯಲ್ಲಿ ಸಾಮಾಜಿಕ ಮತ್ತು ನೈಸರ್ಗಿಕ ನ್ಯಾಯದ ಪರಿಪಾಲನೆಯೊಂದಿಗೆ ಶೈಕ್ಷಣಿಕ ಹಿರಿಮೆಯನ್ನು ಸಾಧಿಸಲು ಹಾಗೂ ಶಿಕ್ಷಣದ ಗುಣಮಟ್ಟವನ್ನು ವೃದ್ಧಿಸಲು ನ್ಯಾಯೋಚಿತ ಪಾರದರ್ಶಕ ಹಾಗೂ ನಿಷ್ಪಕ್ಷವಾದ ಸಂಯೋಜನೆ ಪ್ರಕ್ರಿಯೆ ರೂಪಿಸಬೇಕಾದಲ್ಲಿ ಸ್ಥಳೀಯ ವಿಚಾರಣಾ ಸಮಿತಿಗಳಲ್ಲಿ ವಿಷಯ ಪಾರಂಗತರನ್ನು ಹಾಗೂ ಶೈಕ್ಷಣಿಕ ತಜ್ಞರನ್ನು ನೇಮಿಸುವ ಅಗತ್ಯವನ್ನು ಮನಗಂಡು, ಸ್ಥಳೀಯ ವಿಚಾರಣಾ ಸಮಿತಿಗಳಿಗೆ ಸಿಂಡಿಕೇಟ್ ಸದಸ್ಯರನ್ನು ಅಧ್ಯಕ್ಷರಾಗಿ ನೇಮಿಸದೇ ಕೇವಲ ವಿಷಯ ಪರಿಣಿತರನ್ನು ನೇಮಕ ಮಾಡಬೇಕೆಂದು ಸರ್ಕಾರ ಸೂಚಿಸಿರುವ ವಿಷಯವನ್ನು ಕುಲಪತಿಗಳು ಸಭೆಯ ಗಮನಕ್ಕೆ ತಂದರು.

ಕರ್ನಾಟಕ ಸರ್ಕಾರ, ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮದ ಸಂರಕ್ಷಕರಾಗಿದ್ದು, ವಿಶ್ವವಿದ್ಯಾನಿಲಯದ ಅಸ್ತಿತ್ವ ಹಾಗೂ ನಿರ್ವಹಣೆಯ ವಿಷಯದಲ್ಲಿ ಸರ್ಕಾರ ಅಂತಿಮ ಅಧಿಕಾರವನ್ನು ಹೊಂದಿರುತ್ತದೆ. ಹೀಗಾಗಿ ಸರ್ಕಾರದ ಮಾರ್ಗದರ್ಶನ / ಸುತ್ತೋಲೆಗಳು ಕಡ್ಡಾಯವಾಗಿ ಪಾಲಿಸಬೇಕಾಗುತ್ತದೆ.

ಸದಸ್ಯರಾದ ಡಾ. ಬಿ. ಆರ್. ಸುಪ್ರೀತ್ ರವರು ತಮ್ಮ ಅಭಿಪ್ರಾಯ ವ್ಯಕ್ತಪಡಿಸುತ್ತಾ, ನ್ಯಾಯಾಲಯದಲ್ಲಿ ಸಲ್ಲಿಸಿದ ರಿಟ್ ಅರ್ಜಿ ಕುರಿತು ವಿವರಿಸಿ, ಸ್ಥಳೀಯ ವಿಚಾರಣಾ ಸಮಿತಿಗಳು ಅತ್ಯಂತ ಘನತೆ ಹಾಗೂ ಜವಾಬ್ದಾರಿಯತವಾಗಿ ನಡೆದುಕೊಳ್ಳಬೇಕಾದ ಸಮಿತಿಗಳಾಗಿದ್ದು, ಈ ಸಮಿತಿಗಳು ಮಹಾವಿದ್ಯಾಲಯದ ತಪ್ಪುಗಳನ್ನು ಮಾತ್ರ ಎಣಿಸದೆ ಮಹಾವಿದ್ಯಾಲಯದ ಬೆಳವಣಿಗೆಗೆ ಸಹಕಾರ ನೀಡಬೇಕು. ಈ ನಿಟ್ಟಿನಲ್ಲಿ ಅಗತ್ಯ ಸಲಹೆ, ಸೂಚನೆ, ಮಾರ್ಗದರ್ಶನಗಳನ್ನು ಮಹಾವಿದ್ಯಾಲಯಗಳಿಗೆ ನೀಡಬೇಕೆಂದು ತಿಳಿಸಿ ಉಚ್ಚನ್ಯಾಯಾಲಯ ಮಧ್ಯಂತರ ಆದೇಶದ ಪ್ರಕಾರ ಸ್ಥಳೀಯ ವಿಚಾರಣಾ ಸಮಿತಿಗಳನ್ನು ಸಿಂಡಿಕೇಟ್ ಸದಸ್ಯರ ಅಧ್ಯಕ್ಷತೆಯಲ್ಲಿ ರಚಿಸಬಹುದೆಂದು ಅಭಿಪ್ರಾಯ ಪಟ್ಟರು.

ಸಂಯೋಜನಾ ಪ್ರಕ್ರಿಯೆಯ ವಿಧಿ ವಿಧಾನಗಳು ಮತ್ತು ಸ್ಥಳೀಯ ವಿಚಾರಣಾ ಸಮಿತಿಗಳು ಅನುಸರಿಸಬೇಕಾದ ಕ್ರಮಗಳ ಕುರಿತು ಮಾನ್ಯ ಕುಲಪತಿಗಳು ಪ್ರಾತ್ಯಕ್ಷಿಕತೆಯನ್ನು ನೀಡಿ, ತಾತ್ಕಾಲಿಕ ಸಂಯೋಜನೆ ಮತ್ತು ಶಾಶ್ವತ ಸಂಯೋಜನೆಯ ಲಕ್ಷಣಗಳ ಕುರಿತು ಸಭೆಗೆ ವಿವರಿಸಿದರು. ಹೊಸ ಸಂಯೋಜನೆ ನೀಡುವಲ್ಲಿ ಗಮನಿಸಬೇಕಾದ ಪ್ರಮುಖ ವಿಷಯಗಳು, ರಾಜ್ಯ ಸರ್ಕಾರದ ಆದೇಶದ ಪ್ರಕಾರ ಬಿ.ಬಿ.ಎಂ.ಪಿ ವ್ಯಾಪ್ತಿಯಲ್ಲಿ ಸ್ಥಾಪಿಸಬೇಕಾದ ಕಾಲೇಜುಗಳು ಹೊಂದಿರಬೇಕಾದ ಜಮೀನಿನ ಅಳತೆ, ಬಿ.ಬಿ.ಎಂ.ಪಿ ಹೊರತು ಪಡಿಸಿ ಇತರ ಸ್ಥಳಗಳಲ್ಲಿ ಇರಬೇಕಾದ ಅಗತ್ಯ ಜಮೀನಿನ ವಿವರಣೆಗಳನ್ನು ಸಭೆಗೆ ಒದಗಿಸಿದರು.

***ಸಿಂಡಿಕೇಟ್ ತೀರ್ಮಾನ:***

**ಕುಲಪತಿಗಳು ಕೈಗೊಂಡ ಕ್ರಮಗಳು ಹಾಗೂ ವಿವರಗಳಿಗೆ ಒಪ್ಪಿಗೆ ನೀಡಿ ದಿನಾಂಕ 31.12.2024 ರಂದು ಜರುಗಿದ ಸಿಂಡಿಕೇಟ್ ಸಭೆಯ ತೀರ್ಮಾನದಂತೆ ಕ್ರಮವಹಿಸಲು ತೀರ್ಮಾನಿಸಲಾಯಿತು.**

**ಸಾಮಾನ್ಯ ವಿಷಯಗಳ ಚರ್ಚೆ:**

1. ಸದಸ್ಯರಾದ ಡಾ. ಬಿ. ಆರ್. ಸುಪ್ರೀತ್‌ರವರು ವಿಶ್ವವಿದ್ಯಾನಿಲಯದ ಐತಿಹಾಸಿಕ ಕಟ್ಟಡಗಳ ನವೀಕರಣಗಳ, ಹೊಸ ಕಟ್ಟಡದ ನಿರ್ಮಾಣ, ಕ್ರೀಡಾ ಸಮುಚ್ಚಯದ ನಿರ್ಮಾಣ ಕುರಿತಂತೆ ಶ್ಲಾಘನೆಯನ್ನು ವ್ಯಕ್ತಪಡಿಸಿ ಇವುಗಳಿಗೆ ಪೂರಕವಾಗಿ ಪ್ರಸ್ತುತ ಸನ್ನಿವೇಶಕ್ಕೆ ಅನುಗುಣವಾದ ಆರ್ಟೀಫಿಶಿಯಲ್ ಇಂಟಲಿಜನ್ಸ್ ಮತ್ತು ಮಿಶನ್ ಲರ್ನಿಂಗ್‌ನಂತಹ ಕೋರ್ಸುಗಳನ್ನು ಪ್ರಾರಂಭಿಸಿರುವುದರಿಂದ, ಈ ಕೋರ್ಸುಗಳ ಕಲಿಕೆಗೆ ಅಗತ್ಯವಾದ, ತಾಂತ್ರಿಕ ಪ್ರಾಯೋಗಾಲಯವನ್ನು (Technical Laboratory) ಸ್ಥಾಪಿಸಲು ಅಗತ್ಯವಾದ ಕ್ರಮವನ್ನು ವಹಿಸಬೇಕೆಂದು ಪ್ರಸ್ತಾಪಿಸಿದರು. ಇಂತಹ ಪ್ರಯೋಗಾಲಯಗಳು ಎಲ್ಲ ಆಧುನಿಕ ತಂತ್ರಜ್ಞಾನಗಳನ್ನು ಒಳಗೊಂಡಿರಬೇಕಾಗುತ್ತದೆ. ಈ ರೀತಿ ಸಿದ್ಧಪಡಿಸಿದ Technical Laboratory ಸೌಲಭ್ಯವನ್ನು ಸಂಯೋಜಿತ ಮಹಾವಿದ್ಯಾಲಯಗಳು ಶುಲ್ಕ ಪಾವತಿಸಿ ಉಪಯೋಗಿಸಬಹುದಾಗಿದೆ ಎಂದು ಹೇಳಿದರು.
2. Internet ಸಮಸ್ಯೆಯನ್ನು ಸರಿದೂಗಿಸಲು ಬೆಂಗಳೂರು ನಗರ ವಿಶ್ವವಿದ್ಯಾನಿಲಯದ 2 ಆವರಣಗಳನ್ನು Wi Fi ಗೊಳಿಸಬೇಕೆಂದು ಸಲಹೆ ನೀಡಿದರು.

ಮಾನ್ಯ ಸದಸ್ಯರು ಸೂಚಿಸಿದ ವಿಷಯಗಳನ್ನು ಆಯವ್ಯಯವನ್ನು ಪರಿಗಣಿಸಿ ಅಗತ್ಯ ಕ್ರಮವಹಿಸಲಾಗುವದು ಎಂದು ತಿಳಿಸಿದರು.

ಕುಲಸಚಿವರು ರವರಿಂದ ವಂದನಾರ್ಪಣೆ ಹಾಗೂ ರಾಷ್ಟ್ರಗೀತೆಯೊಂದಿಗೆ ಸಭೆ ಮುಕ್ತಾಯವಾಯಿತು.

**ಸಹಿ/-**
**ಕುಲಸಚಿವರು**
**ಸದಸ್ಯಕಾರ್ಯದರ್ಶಿಗಳು**

**ಸಹಿ/-**
**ಕುಲಪತಿಗಳು**
**ಸಭಾಧ್ಯಕ್ಷರು**

**ಕುಲಸಚಿವರು**
**ಬೆಂಗಳೂರು ನಗರ ವಿಶ್ವವಿದ್ಯಾನಿಲಯ**
**ಬೆಂಗಳೂರು**